# ಕಲಿಕೆಯ ಕಲ್ಪವೃಕ್ಷ ಇಗ್ನೋ

ಶಿಕ್ಷಣ ವಂಚಿತರೂ ಹಲವು ಪದವಿ ಪಡೆಯಬಹುದು. ದುಡಿಮೆಯೊಂದಿಗೆ ಕಲಿಕೆಯನ್ನೂ ಮಾಡಬಹುದು. ವಿದ್ಯಾರ್ಹತೆ–ಕೌಶಲ್ಯ ಇಲ್ಲ ಎಂದು ಹಿಂಜರಿಯುವ ಪ್ರಶ್ನೆಯೇ ಇಲ್ಲ. ‘ಶ್ರದ್ಧೆಯಿಂದ ಓದುವುದೇ ಆದರೆ ವೇದಿಕೆ ಇಲ್ಲಿದೆ; ಜ್ಞಾನವನ್ನು ಗಳಿಸಲು ಸರ್ವರೂ ಸ್ವತಂತ್ರರು’ ಎಂದು ಹೇಳುತ್ತದೆ ಇಗ್ನೋ.

■ ರಾಘವೇಂದ್ರ ಕೆ.




ಅವಳಿ ಸಹೋದರಿಯರು ಸುಮೈಯಾ ಅಂಜುಮ್ ಮತ್ತು ಸುರಯಾ ಅಂಜುಮ್ ಜೊತೆಯಾಗಿ ಪದವಿ ಪಡೆದಿದ್ದರು.

ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಲಕ್ಷಗಟ್ಟಲೆ ಹಣ ಸುರಿಯಬೇಕು. ಹೀಗಿರುವಾಗ ಉನ್ನತ ಶಿಕ್ಷಣ ಗಗನ ಕುಸುಮವೇ ಸರಿ ಎಂದು ಹುಬ್ಬೇರಿಸುವ ದುಬಾರಿ ದಿನಮಾನಗಳಲ್ಲಿಯೇ, ಪದವಿಗಳು ನಮ್ಮನ್ನೇ ಅರಸಿ ಬಂದು ನಮ್ಮ ಮನೆ ಬಾಗಿಲನ್ನು ತಟ್ಟುತ್ತಿವೆ ಅಂದರೆ ಅದು ಖಂಡಿತ ಉತ್ಪ್ರೇಕ್ಷೆ ಅಲ್ಲ. ‘ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ’ ಶಿಕ್ಷಣ ವಂಚಿತ ಅಧ್ಯಯನ ಆಸಕ್ತ, ಪದವಿ ನಿರೀಕ್ಷಿತರ ಅನುಕೂಲಕ್ಕಾಗಿ ಅವರ ಮನೆ ಬಾಗಿಲಿಗೆ ಪದವಿಯನ್ನು ತಲುಪಿಸುವ ಶಿಕ್ಷಣ ಕಾರ್ಯಕ್ರಮವನ್ನು ವಿಸ್ತರಿಸಿದೆ.

ಬಿ.ಎ., ಬಿ.ಕಾಂ., ಬಿ.ಎಸ್ಸಿ., ಎಂ.ಎ., ಎಂ.ಕಾಂ. ಹಾಗೂ ಎಂ.ಎಸ್ಸಿ.ಯಂತಹ ಔಪಚಾರಿಕ, ಮಾಸ್ಟರ್ಸ್ ಡಿಗ್ರಿ ಮಾತ್ರವಲ್ಲ – ವೃತ್ತಿ ಶಿಕ್ಷಣ, ನವೋದ್ಯಮ ಆಧಾರಿತ, ಕೌಶಲ್ಯಾಭಿವೃದ್ಧಿ ಸಾಮರ್ಥ್ಯವನ್ನು ಕಡಿಮೆ ವೆಚ್ಚದಲ್ಲಿ ಗಳಿಸಬಹುದು. ಶಿಕ್ಷಣ ವಂಚಿತನಾಗಿ ಅದರ ಮಹತ್ವವನ್ನು ಅರಿತಿದ್ದೇನೆ. ಮತ್ತೊಬ್ಬರು ನನ್ನ ಹಾಗೆ ವಂಚನೆಗೆ ಒಳಗಾಗಬಾರದು. ಅವರಿಗಾಗಿ ನಾನೇ ಒಂದು ಸ್ವಂತ ಶಾಲೆಯನ್ನು

### ದುಡಿಯುವ ಆಸೆ, ಆದರೆ...

‘ದುಡಿಯಲು ಇಚ್ಛೆ ಇದ್ದರೆ ಹಲವು ಮಾರ್ಗ’ ಈ ಮಾತಿಗೆ ಪೂರಕ ಎನ್ನುವಂತೆ ಇಷ್ಟದ ವೃತ್ತಿಗೆ ಅರ್ಹತೆಯನ್ನು ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ ಮೂಲಕ ಗಳಿಸಬಹುದು. ಮನೆಯಲ್ಲೇ ಇದ್ದು ಪ್ಲೇ ಹೋಂ ನಡೆಸಬೇಕು ಎನ್ನುವವರಿಗೂ ಒಂದು ಕೋರ್ಸ್ ಇದೆ.

ವೃದ್ಧಾಶ್ರಮ ನಡೆಸಬೇಕು. ಅದನ್ನು ಹೇಗೋ ಮಾಡಬಹುದು. ಅದಕ್ಕೆ ಲೈಸೆನ್ಸ್ ಬೇರೆ ಇಲ್ವಲ್ಲ ಎಂದೂ ಚಿಂತಿಸುವರಿಗೂ ಇಲ್ಲಿದೆ ಪರಿಹಾರ. ಹಿರಿಯರ ಪೋಷಣೆ ಆರೈಕೆಗೆ ಬೇಕಾಗುವ ಕೌಶಲ್ಯವನ್ನು ಕಲಿಸುವ ಜೊತೆಗೆ ಸಂಸ್ಥೆಯನ್ನು ನಡೆಸಲು ಬೇಕಾಗುವ ಅರ್ಹತಾ ಪ್ರಮಾಣ ಪತ್ರವನ್ನು ಇಲ್ಲಿ ಗಳಿಸಬಹುದು. ಒಟ್ಟಾರೆ ಸ್ವಾವಲಂಬಿ ಬದುಕು, ಆರ್ಥಿಕ ಸ್ವಾತಂತ್ರ್ಯಕ್ಕೆ ಇದೊಂದು ವೇದಿಕೆಯೇ ಸರಿ.